

ಎಂ.ಬಿ. ಪಾಟೀಲರ ಗ್ರಾಮೀಣ ಸೊಗಡಿನ ಕೃತಿ

ಲಭ್ಯವಿಲ್ಲದಿರುವುದರಿಂದ ಆ ಚಿತ್ರಗಳೂ ಸಹ ಕರ್ನಾಟಕದ ದೃಶ್ಯಕಲಾ ಇತಿಹಾಸದ ಛಿದ್ರಗೊಂಡ ಚಿತ್ರಗಳಾಗಿ ನಮಗೆ ಲಭ್ಯವಿವೆ.

ಪಾಟೀಲರ ವಿಭಿನ್ನ ಕೊಡುಗೆಯಾದರೂ ಯಾವುದು?

ಮೂಲಭೂತವಾಗಿ ಕಲೆಯ ಶಾಶ್ವತತೆಯ ಬಗ್ಗೆಯೇ ವಿಭಿನ್ನ ವ್ಯಾಖ್ಯಾನವನ್ನು ಕೊಟ್ಟಿದ್ದು ಇವರ ಸಾಧನೆ. ಅಂದರೆ, ಸಂಗ್ರಹಿಸಲಾಗದ, ಸಂಗ್ರಹಿಸಲು ಬಾರದಂತೆ ಕಲಾಸೃಷ್ಟಿಯನ್ನು ವ್ಯಾಖ್ಯಾನಿಸಿದ್ದು ಇವರ ಕೊಡುಗೆ. ಆದ್ದರಿಂದಲೋ ಏನೋ ಇವರ ಕೃತಿಸಮೂಹವೆಂದರೆ ಅದು ಇವರ ಭಾವಚಿತ್ರ ಪ್ರಾತ್ಯಕ್ಷಿಕೆಯೇ ಹೌದು. ಭಾವಚಿತ್ರಕ್ಕಿಂತಲೂ ಪ್ರಾತ್ಯಕ್ಷಿಕೆಯ ಸಾಮರ್ಥ್ಯವೇ ಅವರ ಸಾಧನೆ. ಪೂರ್ಣವಲ್ಲದ, ಸಂಗ್ರಹಾಲಯದ ಚೌಕಟ್ಟಿನಿಂದ ಬಂದಿಸಿಡಲಾಗದ, ಪ್ರೇಕ್ಷಕರ ನೇರ ಭಾಗವಹಿಸುವಿಕೆಯಿಲ್ಲದೆ ನಿರ್ಮಾಣವಾಗದ್ದು ಪ್ರಾತ್ಯಕ್ಷಿಕೆ. ಅಂತೆಯೇ ಸ್ವಂತಃ ಪಾಟೀಲರ ವ್ಯಕ್ತಿತ್ವ ಕೂಡ. ಕಲೆಯ ಪಾಠವನ್ನು ಅರಿಯಬೇಕೆಂದುಕೊಳ್ಳುವವರಿಗೆ ಇವರು ತೆರೆದುಕೊಂಡರೂ ಸಹ ಇವರನ್ನು ಹಡಪದರಂತೆ ಔಪಚಾರಿಕವಾಗಿ ಕಲಾಗುರು ಎನ್ನಲಾಗದು. ಇವರು ಪ್ರೇಕ್ಷಕ ಪ್ರಾತ್ಯಕ್ಷಿಕೆಯಾಚೆಗಿನ ಕಲಾಕ್ರಿಯೆಯನ್ನು ತನ್ನ ವಿಶಿಷ್ಟತೆಗಾಗಿ ಮನ್ನಿಸಲಾಗದಿದ್ದರೂ ಕೆ. ವೆಂಕಟಪ್ಪನವರಿಗೆ ದೊರಕಿದ ನಿಗೂಢ ವ್ಯಕ್ತಿತ್ವದ ಪ್ರಭೆ ಇವರಿಗೆ ಲಭಿಸಲಿಲ್ಲ. ಶೈಲೀಕರಣ, ರಾಷ್ಟ್ರೀಯತೆಗಳನ್ನು ಮೀರಲಿರುವ ಆಧುನಿಕ ಉಪಾಯವಾದ ಕೊಲಾಜ್ ತಂತ್ರದ ಕೃತಿಗಳನ್ನು ರಚಿಸಿದರೂ ಸಹ ಒಂದು ಪ್ರಾಂತೀಯತೆಯ ಇತಿಮಿತಿಯನ್ನವು ಮೀರಲಾಗಲಿಲ್ಲ. ಹೀಗೆ ರಾಷ್ಟ್ರ, ಪ್ರೇಕ್ಷಕ ಮತ್ತು ಬೋಧನೆ ಎಂಬ ಈ ಮೂರೂ ಸ್ಥಾಪಿತ ಕಲಾತ್ಮಕ ನೆಲೆಗಳಲ್ಲಿ ತಮ್ಮ ಬಹುಮುಖಿ ಗುಣಗಳನ್ನು ಮತ್ತು ತಮ್ಮ ಬಹುಮುಖತ್ವದ ಮೂಲಕ ಸ್ಥಾಪಿತ ಕಲಾಪರಿಕಲ್ಪನೆಗಳನ್ನು ಪರೀಕ್ಷೆಗೊಡ್ಡಿದವರು ಪಾಟೀಲ್. ರೂಪಕವೊಂದನ್ನು ಬಳಸಿ ಹೇಳಬಹುದಾದರೆ,